ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 1, Jul-Aug 2020, 65-72
©IIMRD, Mysuru
IIMRD JOURNALS
www.iimrd.com

# ಸೋಲಿಗ ಬುಡಕಟ್ಟು ಸಮುದಾಯದ ಸಾಮಾಜಿಕ ಜೀವನ

ಡಾ. ಶ್ರೀನಿವಾಸ್ ವಿ[1]

## ಪೀಠಿಕೆ

ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲಿ ಸೋಲಿಗ ಸಮುದಾಯದವರು ಅತ್ಯಂತ ಪ್ರಮುಖವಾದ ಸಮುದಾಯವಾಗದೆ. ಪ್ರಸ್ತುತ ಲೇಖನದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಸೋಲಿಗ ಸಮುದಾಯದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ ಕುರಿತು ಸಮಗ್ರ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಮುಖ್ಯವಾಗಿ ಸೋಲಿಗರ ಮೂಲವನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಸೋಲಿಗ ಸಮುದಾಯದ ಉಗಮ, ವಾಸ, ಮತ್ತು ಅವರುಗಳಲ್ಲಿನ ಉಪ ಪಂಗಡಗಳು, ಕುಲಗಳ ಕುರಿತು ಮಾಹಿತಿಯನ್ನ ವಿವರಿಸಲಾಗಿದೆ. ಸೋಲಿಗರ ಆರ್ಥಿಕ ಜೀವನ, ಜನನ ಸಂಸ್ಕಾರ, ವಿವಾಹ ಪದ್ಧತಿ, ಧಾರ್ಮಿಕ ಜೀವನ, ಮರಣ ಸಂಸ್ಕಾರ, ನ್ಯಾಯ ಪದ್ಧತಿ, ಭಾಷೆ ಮತ್ತು ಶಿಕ್ಷಣ, ಸಾಮಾಜಿಕ ಜೀವನ ಮುಂತಾದ ವಿಚಾರಗಳನ್ನು ಈ ಲೇಖನದಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ.

ಸೋಲಿಗರು ಹೆಚ್ಚಾಗಿ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಹುಣಸೂರು, ಚಾಮರಾಜನಗರ ಜಿಲ್ಲೆಯ ಯಳಂದೂರು, ಕೊಳ್ಳೇಗಾಲ, ಚಾಮರಾಜನಗರ, ಗುಂಡ್ಲುಪೇಟೆ ತಾಲೂಕುಗಳಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿ ಕಂಡುಬರುತ್ತಾರೆ (ಹಳೇ ಮೈಸೂರು ಭಾಗದ ಭೌಗೋಳಿಕ ಪ್ರದೇಶಗಳು). ಸ್ವಾತಂತ್ರ್ಯ ಪೂರ್ವದಿಂದಲೂ 1931ರ ಜನಗಣತಿಯ ಪ್ರಕಾರ ಸೋಲಿಗರನ್ನು ಆದಿವಾಸಿ (ಬುಡಕಟ್ಟು) ಸಮುದಾಯ ಒಂದು ಮತ್ತು ಶೋಷಣೆಗೆ ಒಳಗಾದ ಜನಾಂಗವೆಂತಲೂ ಹೇಳಲಾಗಿದೆ. ಸೋಲಿಗರು ಕರ್ನಾಟಕದಲ್ಲಿ ಒಟ್ಟು ಒಂಭತ್ತು ಜಿಲ್ಲೆಗಳಲ್ಲಿ ವಾಸವಿದ್ದರೂ, ಸುಮಾರು ಶೇ. 80–81ರಷ್ಟು ಸೋಲಿಗರು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿಯೇ ಕಂಡುಬರುತ್ತಾರೆ. ಅವರ ಪ್ರಮುಖ ಕೇಂದ್ರಗಳು ಬಿಳಿಗಿರಿರಂಗನ ಬೆಟ್ಟ ಹಾಗೂ ಮಲೆಮಹದೇಶ್ವರ ಬೆಟ್ಟ. ಈ ಬೆಟ್ಟಗಳು ಎತ್ತರವಾದ ಪ್ರದೇಶಗಳಾಗಿದ್ದು, ಅಲ್ಲಿನ ಭೌಗೋಳಿಕ ಪರಿಸರ ಸೋಲಿಗರ ಜೀವನ ನಿರ್ವಹಣೆಗೆ ಅನುಕೂಲಕರವಾಗಿದೆ.

2011ರ ಜನಗಣತಿಯ ಪ್ರಕಾರ ಸೋಲಿಗರ ಒಟ್ಟು ಜನಸಂಖ್ಯೆ 46,268 ಇದ್ದು, ಮುಖ್ಯ ಕಸುಬು ಕೂಲಿ. ಕೆಲವರಿಗೆ ಮಾತ್ರ ಅಲ್ಪ ಸ್ವಲ್ಪ ಜಮೀನು ಇದ್ದು, ಇನ್ನುಳಿದವರಿಗೆ ಜಮೀನು ಇಲ್ಲದ ಕಾರಣ ಕೂಲಿಯನ್ನೇ ನಂಬಿಕೊಂಡು ಜೀವನವನ್ನು ನಡೆಸುತ್ತಿದ್ದಾರೆ. ತಂದೆ ತಾಯಂದಿರು ಕೂಲಿಗಾಗಿ ಬೇರೆ ಬೇರೆ ಕಡೆ ವಲಸೆ ಹೋಗುವುದರಿಂದ ಮಕ್ಕಳು ಸಹ ಅವರ ಜೊತೆಯಲ್ಲಿಯೇ ಹೋಗುತ್ತಾರೆ. ಬಡತನ, ಅನಕ್ಷರತೆ, ನಿರುದ್ಯೋಗ, ಸಾಮಾಜಿಕ, ಆರ್ಥಿಕ ಕಾರಣಗಳಿಂದ ಮಕ್ಕಳು ಕೂಲಿಗಳಾಗಿ ಉದ್ಯೋಗ ಹರಸಿ ಹೊರಟು ಬಿಡುತ್ತಾರೆ. ಹಸಿವನ್ನು ತಾಳಲಾರದೆ ಊಟಕ್ಕೋಸ್ಕರವೇ ಇಡೀ ದಿನ ದುಡಿಯುತ್ತಿದ್ದಾರೆ.

[1] *ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ ಮೈಸೂರು–570006*

ಸೋಲಿಗರ ಬಗೆಗೆ ನಡೆದಿರುವ ಅಧ್ಯಯನ ಕೆಲವಿವೆ. ಈಗಾಗಲೇ ಅವರ ಸಂಸ್ಕೃತಿಯ ಎಷ್ಟೋ ಅಂಶಗಳು ಕಣ್ಮರೆಯಾಗಿದೆ. ಸೋಲಿಗರ ಬಗೆಗೆ ದೊರೆಯುವ ಲಿಖಿತ ಆಧಾರಗಳು ಇಲ್ಲಿವೆ.

ಬುಕಾನನ್ ಅವರು 1807ರಲ್ಲಿ ಸೋಲಿಗರ ಬಗೆಗೆ ಅವರು ಆಡುತ್ತಿದ್ದ ಭಾಷೆ, ಉಡುಪು, ಗೃಹವ್ಯವಸ್ಥೆ ಕುರಿತಾಗಿ ವಿವರಗಳನ್ನು ಕೊಡುತ್ತಾರೆ. ಥರ್‌ಸ್ಟನ್ (1909) ಅವರು ಎಂಟು ಪುಟಗಳಷ್ಟು ಮಾಹಿತಿಯನ್ನು ನೀಡಿದ್ದಾರೆ. ಅದರಲ್ಲಿ ಸೋಲಿಗರ ಸಂಸ್ಕೃತಿಯ ಬಗ್ಗೆ ತಿಳಿಸಿದ್ದಾರೆ. ಅವರ ಪ್ರಕಾರ ದಿಂಬಂ (ಈಗಿನ ತಮಿಳುನಾಡು) ಹತ್ತಿರ ಕಂಡುಬರುವ ಸೋಲಿಗರ ಬಗೆಗೆ ಹೇಳಿದ್ದಾರೆ. ಐದು ಕುಲದ ಸೋಲಿಗರ ಬಗೆಗೆ ಹೇಳುವುದರ ಜೊತೆಗೆ ಹನ್ನೆರಡು ಕುಲದ ಸೋಲಿಗರ ಬಗೆಗೂ ಬರೆದಿದ್ದಾರೆ. ಸೋಲಿಗರ ಕುಲ ಪರಿಚಯದ ಬಗೆಗೆ ಕೆಲವು ಮಾಹಿತಿಗಳನ್ನು ನೀಡಿರುವುದರ ಜೊತೆಗೆ ಅವರ ಆಹಾರ ಸಂಗ್ರಹಣೆಯ ಮುಖ್ಯ ವೃತ್ತಿಗಳಾದ ವ್ಯವಸಾಯ, ಬೇಟೆ ಹಾಗೂ ಕಾಡಿನಲ್ಲಿ ಗೆಡ್ಡೆ ಗೆಣಸುಗಳನ್ನು ಅಗೆದು ತಿನ್ನುವ ಅವರ ಜೀವನ ಕ್ರಮ ಮುಂತಾದವುಗಳ ಬಗೆಗೆ ವಿವರಣೆ ನೀಡಿದ್ದಾರೆ. ಇದು ಅಂದಿನ ಸೋಲಿಗರ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಶ್ರೀನಿವಾಸ್ (2019) ರವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಪಿಹೆಚ್.ಡಿ. ಮಹಾ ಪ್ರಬಂಧದಲ್ಲಿಯೂ ಕೂಡ ಸೋಲಿಗರ ಐತಿಹಾಸಿಕ ಜೀವನದ ಬಗ್ಗೆ ಮಾಹಿತಿ ಕಂಡು ಬರುತ್ತದೆ. ಅಯ್ಯಪ್ಪನ್ (1948) ಎಂಬುವರು ಸೋಲಿಗರ ಬಗೆಗೆ ಕೆಲವು ಮಾಹಿತಿ ನೀಡಿದ್ದಾರೆ. 1948ರಲ್ಲಿ ಮದರಾಸಿಗೆ ಸಂಬಂಧಿಸಿದ ಸೋಲಿಗ ಬುಡಕಟ್ಟಿನ ಬಗೆಗೆ ವಿವರಣೆ ನೀಡುತ್ತಾರೆ. ಲೂಯಿಜ್ (1963) ಅವರು ತಮ್ಮ ಗ್ರಂಥದಲ್ಲಿ ಕರ್ನಾಟಕದ ಬುಡಕಟ್ಟು ಜನರ ಬಗೆಗೆ ಹೇಳುವಾರ ಸೋಲಿಗರ ಬಗ್ಗೆಯೂ ಬರೆದಿದ್ದಾರೆ. ಹೆಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅನಂತಕೃಷ್ಣ ಅಯ್ಯರ್‌ರವರು ಸೋಲಿಗರ ಬಾಲ್ಯ, ಯೌವ್ವನ, ಮದುವೆ, ಅಂತ್ಯಸಂಸ್ಕಾರ ಮುಂತಾದ ಆಚರಣೆಗಳ ಬಗೆಗೂ ಅಲ್ಲದೆ, ಅವರ ಆರ್ಥಿಕ ಹಾಗೂ ಸಾಮಾಜಿಕ ಜೀವನದ ಬಗೆಗೂ ತಿಳಿಸಿದ್ದಾರೆ.

ಮೊರಬ್ (1977)ರವರು ಆಂಥ್ರೋಪೋಲಾಜಿಕಲ್ ಸರ್ವೆ ಆಫ್ ಇಂಡಿಯಾದ ವತಿಯಿಂದ ಪ್ರಕಟಿಸಿದ ಗ್ರಂಥ The Soliga of Biligirirangana Hills ಈ ಗ್ರಂಥದಲ್ಲಿ ಸೋಲಿಗರು ಹೆಚ್ಚಾಗಿ ವಾಸಿಸುವ ಬಿಳಿಗಿರಿರಂಗನ ಬೆಟ್ಟದ ಸುತ್ತ ಮುತ್ತ ಕ್ಷೇತ್ರ ಕಾರ್ಯ ನಡೆಸಿ ಮಾಹಿತಿಯನ್ನು ಸಂಗ್ರಹಿಸಿ ಮಾನವಶಾಸ್ತ್ರೀಯ ಅಧ್ಯಯನ ನಡೆಸಿದ್ದಾರೆ. ಲೇಖಕರು ತಮ್ಮ ಈ ಗ್ರಂಥದಲ್ಲಿ ಸೋಲಿಗರ ಅರಿವು, ಅವರ ಸ್ಥಳೀಯ ಸಂಘ ಸಂಸ್ಥೆಗಳು, ಸಂಸ್ಕೃತಿ, ಆರ್ಥಿಕ ಜೀವನ, ಸಾಮಾಜಿಕ ಜೀವನ, ಬಂಧುತ್ವ, ಧಾರ್ಮಿಕ ನಂಬಿಕೆಗಳು, ಆಚರಣೆಗಳು ಮತ್ತು ಇತರೆ ಸೋಲಿಗರ ಸಮಸ್ಯೆಗಳನ್ನು ಕುರಿತು ವಿವರವಾದ ಚರ್ಚೆ ಮಾಡಿದ್ದಾರೆ. ಸೋಲಿಗರ ಜೀವನಕ್ರಮ ಇತ್ಯಾದಿಗಳ ಬಗ್ಗೆ ಇನ್ನೂ ಕೆಲವು ಬಿಡಿ ಲೇಖನಗಳು ದೊರೆಯುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನಮೂದಿಸಬಹುದು. ಉದಾಹರಣೆಗೆ ಸುಬ್ಬಯ್ಯ (1965) ರವರು ಚಾಮರಾಜನಗರದ ಸುತ್ತಮುತ್ತ ನೆಲೆಸಿರುವ ಸೋಲಿಗರ ಆಚಾರ ವಿಧಿಗಳು ಮತ್ತು ಅವರ ಜೀವನ ಕ್ರಮವನ್ನು ಹೇಳಿದ್ದಾರೆ. ಗುರುಬಸವೇಗೌಡರು (1969) ಸೋಲಿಗರ ಭಾಷೆಯ ಬಗೆಗೆ ಭಾಷಾಶಾಸ್ತ್ರೀಯ ಅಧ್ಯಯನವನ್ನು ನಡೆಸಿರುತ್ತಾರೆ. ಅದನ್ನು ಅವರು ಸೋಲಿಗರ ನುಡಿಯಂದೇ ಕರೆದಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಪ್ರತಿ ಹತ್ತು ವರ್ಷಕ್ಕೊಮ್ಮೆ ನಡೆಯುವ ಜನಗಣತಿಯಲ್ಲಿ ಸೋಲಿಗರ ಬಗೆಗೆ ಅನೇಕ ಮಾಹಿತಿಗಳು ದೊರೆಯುತ್ತವೆ ಮತ್ತು ಮೈಸೂರಿನಲ್ಲಿರುವ (Anthropological Survey of India) ಸಂಸ್ಥೆಯ ಮಾನವ ವಿಜ್ಞಾನಿಗಳು ಜೇನುಕುರುಬ, ಬೆಟ್ಟಕುರುಬ, ಸೋಲಿಗ ಮೊದಲಾದ ಕೆಲವು ಬುಡಕಟ್ಟುಗಳ ಬಗೆಗೆ ಅಧ್ಯಯನ ನಡೆಸಿದ್ದಾರೆ. ಅಲ್ಲಿಯೂ ಸಹ ಸೋಲಿಗರ ಬಗ್ಗೆ ಸಾಕಷ್ಟು ಮಾಹಿತಿಗಳು ದೊರಕುತ್ತವೆ.

**ಸೋಲಿಗರ ಉಗಮ**

ಸೋಲಿಗ ಎಂಬ ಹೆಸರು ಅವರಿಗೆ ಬಂದದ್ದಕ್ಕೆ ಅವರಲ್ಲಿ ಒಬ್ಬ ವ್ಯಕ್ತಿ ನೀಡಿದ ಐತಿಹ್ಯ ಈ ರೀತಿ ಇದೆ. ಒಮ್ಮೆ ಪಾರ್ವತಿ ಪರಮೇಶ್ವರರು ತಮ್ಮ ಬೆವರಿನಿಂದ ಎರಡು ಗೊಂಬೆಗಳನ್ನು ಮಾಡಿ ಅವಕ್ಕೆ ಜೀವ ತುಂಬಿದರು. ಒಂದು ನೀಲಯ್ಯನಾಯಿತು. ಇನ್ನೊಮದು ಸಂಕಮ್ಮಳಾಯಿತು. ಮುಂದೆ ವಂಶ ಇವರಿಂದ ಬೆಳೆಯಿತು. ಈ ಮಕ್ಕಳು ಸೋಲಲ ಹಂಬಿನ ಗೆಡ್ಡೆಯನ್ನು ತಿಂದು ಜೀವಿಸುತ್ತಿದ್ದರು. ಹೀಗೆಯೇ ಅವರು ಗೆಡ್ಡೆಯನ್ನು ಕಿತ್ತು ಬೇಯಿಸುತ್ತಾ ತಿನ್ನುತ್ತಲೇ ಮುಪ್ಪಾದರು. ಆದರೆ ಸೋಲಿನ ಹಂಬು ಮಾತ್ರ ಮತ್ತೆ ಮತ್ತೆ ಚಿಗುರಿ ಹೊಸ ಹೊಸ ಗೆಡ್ಡೆ ಬಿಟ್ಟಿತು. ಈ ಮುದುಕ ಗೆಡ್ಡೆ ಕೀಳಲು ಬಂದಾಗ ಆ ಸೋಲನ ಹಂಬು ನಿನ್ನ ಕೈಯಿಂದ ನನ್ನ ಗೆಡ್ಡೆಯನ್ನು ಸಾಯೋವರೆಗೂ ಕಿತ್ತರೂ ನನ್ನನ್ನು ಸೋಲಿಸುವುದಕ್ಕೆ ಆಗಲ್ಲ, ಆದ್ದರಿಂದ ನನ್ನ ಗೆಡ್ಡೆ ಕಿತ್ತು ಸೋತವನು ನೀನು ಸೋಲಿಗ ಎಂದು ಹೇಳಿತು. ಅಂದಿನಿಂದ ಸೋಲಿಗರಿಗೆ ಸೋಲಿಗರು ಎಂಬ ಹೆಸರು ಬಂದಿತು.

ಇನ್ನೊಂದು ವಿವರಣಾತ್ಮಕ ಕತೆ ಈ ರೀತಿ ಇದೆ. ಪಾರ್ವತಿ ಪರಮೇಶ್ವರರಿಂದ ನೀಲಯ್ಯ ಮತ್ತು ನಿಜಗೆಂಪೆಯರ ಜನನವಾಗಿ ಮಹದೇಶ್ವರರ ದಯೆಯಿಂದ ಕಾರಯ್ಯ ಬಿಲ್ಲಯ್ಯರು ಹುಟ್ಟಿದರು. ಅವರ ಕಾಲ ಮುಗಿದು ಅವರಿಂದ ವಂಶಾಭಿವೃದ್ಧಿಯಾದ ಮೇಲೆ ಈ ಗುಂಪಿನ ಜನರಿಗೆಲ್ಲಾ ಒಬ್ಬ ರಾಜನಿದ್ದ ಅವನು ಒಮ್ಮೆ ಶತ್ರು ರಾಜರ ವಿರುದ್ಧ ಪರಾಜಿತನಾಗಿ ಜೀವರಕ್ಷಣೆಗಾಗಿ ಸೋತದ್ದರಿಂದ ಸೋಲುರಾಜ ಎಂದು ಅವನಿಗೆ ಹೆಸರಾಯಿತು. ಅವನ ವಂಶಸ್ಥರಿಗೆ ಸೋಲಿಗರು ಎಂದು ಹೆಸರಾಯಿತು ಸೋಲಿಗರಿಗೆ ಮೊದಲು ಒಬ್ಬ ರಾಜನಿದ್ದನೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲು ನಮಗೆ ಐತಿಹಾಸಿಕ ಆಧಾರಗಳಿಲ್ಲ.

ಸೋಲಿಗರು ತಮ್ಮ ಗಂಡು ಮಕ್ಕಳಿಗೆ ಇಡುವ ಹೆಸರುಗಳು ಗೌಡ ಎಂಬುದರಿಂದ ಮುಕ್ತಾಯವಾಗುತ್ತದೆ. ಈ ಗೌಡ ಎಂಬ ಪದದ ಹಳೆಯ ಮೂಲರೂಪ ಗ್ರಾಮವೃದ್ಧ ಎಂದಿದ್ದೂ ಅನಂತರದಲ್ಲಿ ಗಾವುಂಡ ಎಂಬುದಾಗಿ ಗೌಡ ಆಗಿದೆ ಎಂಬುದು ಈಗಾಗಲೇ ಭಾಷಾಶಾಸ್ತ್ರದಿಂದ ಸಾಬೀತಾಗಿರುವ ವಿಷಯ. ಈ ನಿಟ್ಟಿನಿಂದ ನಾವು ಆಲೋಚಿಸುವುದಾದರೆ ಸೋಲಿಗರು ಗೌಡ ಎಂಬ ಹೆಸರನ್ನು ಇಟ್ಟುಕೊಳ್ಳಬೇಕಾದರೆ ಇವರು ತುಂಬಾ ಹಿಂದೆ ಗ್ರಾಮಗಳಲ್ಲಿ ವಾಸವಾಗಿದ್ದವರಾಗಿರಬೇಕು. ಈ ಸಂದರ್ಭದಲ್ಲಿ ಈ ಜನರಿಗೂ ಬೇರೆಯ ಗುಂಪಿಗೂ ಘರ್ಷಣೆಗಳು ನಡೆದು ಜೀವರಕ್ಷಣೆಯ ಸಲುವಾಗಿ ಕಾಡಿಗೆ ಓಡಿಹೋಗಿರಲು ಸಾಧ್ಯ. ಹೀಗೆ ಸೋತವರನ್ನು ಸೋಲಿಗರು ಎಂದು ಕರೆದಿರಲು ಸಾಧ್ಯ.

ವಿದ್ವಾಂದರೊಬ್ಬರ ಪ್ರಕಾರ ಸೋಲಿಗರಲ್ಲಿ 'ಲ'ಕಾರದ ಸ್ಪಷ್ಟ ಉಚ್ಚಾರಣೆ ಇಲ್ಲದುದರಿಂದ 'ಇಲು' ಎಂಬುದು 'ಇವು' ಆಗಿ ಉಚ್ಚಾರಣೆ ಪಡೆದು 'ಸೋಯಿ' ಎಂಬುದು ಈ ಉಚ್ಚಾರಣೆಯಾಗಿದ್ದು ಅದರ ನಿಜವಾದ ರೂಪವು 'ಸ್ವಾಮಿ' ಎಂದಾಗಿದ್ದು ಮಹದೇಶ್ವರ ಸ್ವಾಮಿಯ ಭಕ್ತರಾದುದರಿಂದ ಇವರನ್ನು ಮೊದಲು ಸ್ವಾಮಿಗ ಎಂದು ಕರೆಯುತ್ತಿದ್ದು, ಅನಂತರದಲ್ಲಿ ಸೋಯಿಗ ಎಂದಾಗಿದ್ದು, ಮುಂದೆ ಜನಬಳಕೆಯಲ್ಲಿ ಸೋಲಿಗ ಎಂದಾಗಿರಬಹುದು ಎಂಬ ವಿವರಣೆ ಹೆಚ್ಚು ಸಮರ್ಥನೀಯ ಎನಿಸದಿದ್ದರು ಸ್ವಾರಸ್ಯವಾದುದ್ದಾಗಿದೆ.

**ಸೋಲಿಗರ ಪಂಗಡಗಳು**

ಎಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅನಂತಕೃಷ್ಣ ಅಯ್ಯರ್ (1930) ಅವರು ಸೋಲಿಗರ ಪಂಗಡಗಳ ಬಗ್ಗೆ ಹೀಗೆ ಬರೆಯುತ್ತಾರೆ. ಸೋಲಿಗರಲ್ಲಿ ನಾಲ್ಕು ಪಂಗಡಗಳಿವೆ. ಅವುಗಳೆಂದರೆ,

1. **ಊರ ಸೋಲಿಗರು:** ಈ ಗುಂಪಿನ ಜನರು ಚಾಮರಾಜನಗರ, ಸತ್ಯಮಂಗಲ ಮುಂತಾದ ಕಡೆಗಳಲ್ಲಿನ ಸಮೀಪದ ಕಾಡುಗಳಲ್ಲಿ ಕಂಡುಬರುತ್ತಾರೆ.
2. **ಮಲೆ ಸೋಲಿಗರು:** ಈ ಗುಂಪಿನ ಜನರು ಬಿಳಿಗಿರಿರಂಗನ ಬೆಟ್ಟ, ಮಲೈ ಮಹದೇಶ್ವರ ಬೆಟ್ಟದ ಸುತ್ತಲಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.
3. **ಕಾಡು ಸೋಲಿಗರು:** ಕಾಡಿನಲ್ಲಿ ಹೆಚ್ಚಾಗಿ ಇವರು ವಾಸಿಸುವುದು ಕಂಡುಬರುತ್ತದೆ. ಇವರು ಬಿಳಿಗಿರಿರಂಗನಬೆಟ್ಟ, ಮಹದೇಶ್ವರ ಬೆಟ್ಟದ ಸುತ್ತಮುತ್ತಲಿನ ಕಾಡುಗಳಲ್ಲಿ ಕಂಡುಬರುತ್ತಾರೆ.
4. **ಊರುಬತ್ತಿ ಸೋಲಿಗರು :** ಇವರು ಹೆಚ್ಚಾಗಿ ಕಾಕನಕೋಟೆ ಕಾಡುಗಳಲ್ಲಿ ಕಂಡುಬರುತ್ತಾರೆ.
5. **ಬುರುಡೆ ಸೋಲಿಗರು:** ಇವರು ಕೊಳ್ಳೇಗಾಲ ತಾಲ್ಲೂಕಿನ ಸುತ್ತಮುತ್ತ, ಹೆಗ್ಗಡದೇವನಕೋಟೆಯ ಸುತ್ತಮುತ್ತ ಕಂಡುಬರುತ್ತಾರೆ.

**ಸೋಲಿಗರಲ್ಲಿ ಐದು ಕುಲಗಳು**

1. **ಹೊಂಗೆಲರ ಕುಲ:** ಇವರ ಕುಲದೇವತೆ ಹೊಂಗೆಯ ಮರ. ಒಮ್ಮೆ ಈ ಗುಂಪಿನ ಸೋಲಿಗರು ಹೊಂಗೆಯ ಮರವನ್ನು ಒಂದು ಬಂಡೆಯ ಹತ್ತಿರ ಕಡಿಯುತ್ತಿದ್ದಾಗ ಈ ದೇವರೆ ಇರುವುದರ ಅರಿವಾಯಿತು. ಅಂದಿನಿಂದ ಹೊಂಗೆಯ ಮರವನ್ನು ಕಡಿಯುವುದನ್ನು ಮತ್ತು ಅದನ್ನು ಒಲೆಗೆ ಹಾಕುವುದನ್ನು ನಿಲ್ಲಿಸಿದರು.
2. **ಆಲರ ಕುಲ:** ಇವರ ಕುಲದೇವತೆ ಮಹದೇಶ್ವರ ಹಾಗೆಯೇ ಬಿಳಿಗಿರಿರಂಗ ಬೆಟ್ಟದ ಹತ್ತಿರ ಇರುವ ಕನ್ನೇರು ಕಾಲೋನಿ ಹತ್ತಿರದಲ್ಲಿರುವ ಕ್ಯಾತೆ ದೇವರು ಈ ಕುಲದ ದೇವತೆಯಾಗಿದೆ.
3. **ಬೆಲ್ಲರ ಕುಲ:** ಇದನ್ನು ಬೆಳ್ಳಿಕುಲ ಎಂದು ಕರೆಯುತ್ತಾರೆ. ಪಂದೇಶ್ವರ ಎಂಬ ದೇವರು ದೇವರ ಬೆಟ್ಟದಲ್ಲಿ ನೆಲೆಸಿರುವ ದೇವತೆ ಇವರ ಕುಲದೇವತೆ. ಈ ದೇವರ ಬೆಟ್ಟವು ಕೊಯಮತ್ತೂರು ಜಿಲ್ಲೆಯ ಭನಂ ತಾಲೂಕಿನಲ್ಲಿದೆ. ಪಂದೇಶ್ವರ ದೇವತೆಯು ಸೋಲಿಗರನ್ನು ಅವರ ಕುಲದ ಬಗೆಗೆ ವಿಚಾರಿಸುತ್ತಿದ್ದಾಗ, ನಾಡಿನ ಆಚಾರಿಗಳು, ಚಿನ್ನ, ಬೆಳ್ಳಿ ಕೆಲಸದಲ್ಲಿ ತೊಡಗಿದ್ದರು. ಆದುದರಿಂದ ಇವರಿಗೆ ಬೆಳ್ಳಿಕುಲ ಎಂದು ಹೆಸರಾಯಿತು.

4. **ಸೂರ್ಯನ ಕುಲ:** ಇವರ ಕುಲದೇವತೆ ಬರಮಸ್ವಾಮಿ, ಈ ದೇವತೆಯ ದೇವಸ್ಥಾನ ಕೊಳ್ಳೇಗಾಲದ ತಾಲೂಕಿನ ಮಾರ್ಟಳ್ಳಿಯಲ್ಲಿದೆ. ಈ ಸುತ್ತಿನ ಜನರು ಕೈಯಲ್ಲಿ ಚೂರಿ ಹಿಡಿದಿದ್ದರಿಂದ ಸೋಲಿಗರು ಆ ಹೆಸರು ಬಂತು ಎಂಬ ನಂಬಿಕೆ ಇದ್ದರೆ, ಬಿಳಿಗಿರಿರಂಗನ ಬೆಟ್ಟದ ಸುತ್ತಲಿನಲ್ಲಿ ಈ ಕುಲದೇವತೆ ಶೂರರು ಎಂದಿದೆ.
5. **ತೆನೇರು ಕುಲ:** ಮಹದೇಶ್ವರ ಇವರ ಮಹದೇಶ್ವರರು ಕೆಲವು ಸೋಲಿಗರ ಕುಲದ ವಿಷಯ ವಿಚಾರಿಸುತ್ತಿದ್ದಾಗ, ಅವರು ರಾಗಿಯ ಹೊರೆಯನ್ನು ತಲೆಯ ಮೇಲೆ ಹೊತ್ತಿದ್ದರು. ಆದುದರಿಂದ ಇವರಿಗೆ ತೆನೇರು ಕುಲ ಎಂದು ಹೆಸರಾಯಿತು.

ಇದರ ಜೊತೆಯಾಗಿ 6) ಜೇನುಕುಲ ಮತ್ತು 7) ಕುಂಬಳು ಕುಲಗಳು ಈ ಎರಡು ಕುಲಗಳನ್ನು ಸೇರಿಸಿಕೊಳ್ಳಲಾಗಿದೆ.

**ಸಾಮಾಜಿಕ ಜೀವನ**

ಸೋಲಿಗರು ತಮ್ಮವರಿಗಿಂತ ಉತ್ತಮ ಜನಾಂಗದಲ್ಲಿ ಊಟ ಮಾಡುವರು. ಆದರೆ ಇವರಿಗಿಂತ ಕೀಳುಜಾತಿಗಳಲ್ಲಿ ಊಟವನ್ನು ಮಾಡುವುದಿಲ್ಲ. ಸಾಮಾನ್ಯವಾಗಿ ಇವರ ಮನೆಗಳು ಹಕ್ಕಿಗೂಡಿನಂತಹ ಸಣ್ಣ ಗುಡಿಸಲಿನಿಂದ ಕೂಡಿದ್ದು, ಮನೆಯವರೆಲ್ಲಾ ಒಳಗಡೆ ಮಲಗದೆ ಗುಡಿಸಲಿನ ಮುಂಭಾಗದಲ್ಲಿ ನಿರಂತರವಾಗಿ ಬೆಂಕಿ ಹಾಕಿಕೊಂಡು ಅದರ ಸುತ್ತಲೂ ಮಲಗುತ್ತಾರೆ. ಆದರೆ ಕೆಲವರಿಗೆ ಮಾತ್ರ ಸರ್ಕಾರದಿಂದ ವಸತಿ ಸೌಲಭ್ಯ ದೊರೆತಿದೆ. ಹಬ್ಬಹರಿದಿನಗಳಲ್ಲಿ ಗಂಡಸರು, ಹೆಂಗಸರು, ಮಕ್ಕಳು, ಹುಡುಗರು, ಹುಡುಗಿಯರು ಎಲ್ಲರು ಸೇರಿ ಅದರಲ್ಲಿರುವ ತಮಟೆ, ಮದ್ದಳೆ, ಕೊಳಲು, ಓಲಗದಂತಹ ವಾದ್ಯವನ್ನು ಬಾರಿಸುತ್ತಾ ಕುಣಿಯುತ್ತಾರೆ.

**ಧಾರ್ಮಿಕ ಜೀವನ**

ಸೋಲಿಗರು ಪೂಜಿಸುವ ಅನೇಕ ದೇವರುಗಳಲಿ ಅವರು ಮುಖ್ಯವಾದ ಆರಾಧ್ಯ ದೇವರು, ಮಹದೇಶ್ವರ, ಬಿಳಿಗಿರಿರಂಗಸ್ವಾಮಿ, ಇನ್ನಿತರ ದೇವರುಗಳಾದ ತೆಳ್ಳೂರಮ್ಮ, ಕಬ್ಬಾಳಮ್ಮ, ಭೈರವೇಶ್ವರ, ಏಳಮುಖದ ಮಾರಿ, ಬೆಟ್ಟಾಳಪ್ಪ, ಚಿಕ್ಕಮ್ಮ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಮಹದೇಶ್ವರ ಅನೇಕರ ಮನೆ ದೇವರು ಆಗಿದ್ದು, ಇವರಲ್ಲಿ ದೇವರ ಬಗ್ಗೆ ಅಪಾರವಾದ ಭಯ ಭಕ್ತಿ ಇದೆ. ಇದಲ್ಲದೆ ಚಂದ್ರಮಾನ ಯುಗಾಗಿ, ಮಕರ ಸಂಕ್ರಾಂತಿ, ಗೌರಿ ಗಣೇಶ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

**ಭಾಷೆ ಮತ್ತು ಶಿಕ್ಷಣ**

ಈ ಪ್ರದೇಶದಲ್ಲಿ ವಾಸಿಸುವ ಸೋಲಿಗರಿಗೆ ಅವರದೇ ಆದ ಭಾಷೆ ಇಲ್ಲ. ಮೂಲತಃ ಕನ್ನಡ ಭಾಷೆಯನ್ನು ಬಿಟ್ಟರೆ ಬೇರೆ ಯಾವ ಭಾಷೆಯು ಅವರಿಗೆ ಬರುವುದಿಲ್ಲ. ಶಿಕ್ಷಣವನ್ನು ಅವರ ಮಕ್ಕಳಿಗೆ ಕನ್ನಡ ಭಾಷೆಯಲ್ಲಿ ಕೊಡಿಸುತ್ತಾರೆ. ಇವರಲ್ಲಿ ಶಿಕ್ಷಣ ಪಡೆದಿರುವವರು ಬಹಳ ಕಡಿಮೆ. ಆದ್ದರಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳು, ಆಶ್ರಮ ಶಾಲೆಗಳು, ಸ್ವಯಂಸೇವಾ ಸಂಸ್ಥೆಗಳು ಸೋಲಿಗರ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುತ್ತಿವೆ.

### ನ್ಯಾಯ ಪದ್ಧತಿ

ಯಾವುದೇ ಒಂದು ಸಮಾಜ ಅದು ಆದಿವಾಸಿ ಸಮಾಜವಾಗಿರಲಿ, ಮುಂದುವರಿದ ಸಮಾಜವಾಗಿರಲಿ ಬೆಳೆಯುತ್ತಾ ಹೊದಂತೆ ಅದರ ಮುನ್ನಡೆಗೆ ಬೇಕಾದ ನಿಯಮಾವಳಿಗಳನ್ನು ಸದಸ್ಯನು ತಮಗಾಗಿ ತಮ್ಮ ಕುಟುಂಬದ ಗುಂಪಿನ ಕ್ಷೇಮಕ್ಕಾಗಿ ತಾವೇ ಪಾಲಿಸಬೇಕಾಗುತ್ತದೆ. ಪ್ರತಿಯೊಂದು ಹಾಡಿಗೂ ಒಬ್ಬ ದೊಡ್ಡ ಯಜಮಾನನಿರುತ್ತಾನೆ. ಅವನ ಸಹಾಯಕ್ಕೆ ಕೋಲ್ಕಾರನೊಬ್ಬನಿರುತ್ತಾನೆ. ಅವನೇ ಎಲ್ಲಾ ವ್ಯವಹಾರವನ್ನು ಬಗೆಹರಿಸುತ್ತಾನೆ. ಇವರಲ್ಲಿ "ಕಟ್ಟೆಮನೆ" ಎಂಬುದು ಇವರ ನ್ಯಾಯಸ್ಥಾನ. ಇಲ್ಲಿ ಮೂರು ಜನ ಯಜಮಾನರಿರುತ್ತಾರೆ. ಅವರೆಂದರೆ ಕುಲದ ಗೌಡ, ನಾಡಗೌಡ ಮತ್ತು ಕಟ್ಟೇಗೌಡ ಇವರು ಕೊಡುವ ತೀರ್ಪೇ ಅಂತಿಮ. ಹೀಗೆ ಕುಲ ಹಿರಿಯರು ಕುಳಿತು ನ್ಯಾಯ ಮಾಡುವ ಪ್ರದೇಶವನ್ನು ಕಟ್ಟೆಮನೆ ಎಂದು ಕರೆಯುತ್ತಾರೆ. ಈಗಲೂ ಅಲ್ಲಲ್ಲಿ ಈ ಬಗೆಯ ಚಾವಡಿಗಳನ್ನು ಕಾಣಬಹುದು. ಈ ಕುಲ ಪಂಚಾಯತಿಗೆ ಯಜಮಾನ ಎಂಬ ಹಿರಿಯನಿರುತ್ತಾನೆ. ಇವನು ಹಾಡಿಯ ಪ್ರಭಾವಶಾಲಿಯಾದ ವ್ಯಕ್ತಿಯಾಗಿರುತ್ತಾನೆ. ಸೋಲಿಗರಲ್ಲಿ ಪಾದರಕ್ಷೆಯಲ್ಲಿ ಹೊಡೆದರೆ ಅದು ದೊಡ್ಡ ತಪ್ಪು. ಹೊಡೆದವನು ದಂಡ ಕೊಡಬೇಕು. ಹೊಡೆಸಿಕೊಂಡವನು ಕುಲಕ್ಕೆ ಊಟ ಕೊಡಬೇಕು. ಈ ರೀತಿಯ ನ್ಯಾಯವ್ಯವಸ್ಥೆ ಇರುವುದರಿಂದಲೇ ಸೋಲಿಗರ ನೀತಿ ನಿಯಮಗಳು ಕಟ್ಟುನಿಟ್ಟಾಗಿ ನಡೆದುಕೊಂಡು ಬರುತ್ತವೆ. ಯಜಮಾನನು ತಪ್ಪು ಮಾಡಿದವನನ್ನು ಶಿಕ್ಷಿಸುವ, ದಂಡವಿಧಿಸುವ ಅಥವಾ ಕುಲದಿಂದ ಹೊರಗೆ ಹಾಕುವ ಅಧಿಕಾರವನ್ನು ಪಡೆದಿರುತ್ತಾನೆ.

### ವಿವಾಹ ಪದ್ಧತಿ

ಸೋಲಿಗರ ವಿವಾಹ ತುಂಬಾ ಸರಳ ವಿವಾಹವಾಗಿದೆ. ಅವರ ಸಂಪ್ರದಾಯದ ಮದುವೆಗೆ ತಗಲುವ ವೆಚ್ಚ ದುಬಾರಿಯಾದುದರಿಂದಲೂ, ಅವರು ಆರ್ಥಿಕವಾಗಿ ಹಿಂದುಳಿದಿರುವುದರಿಂದಲೂ ಈ ರೀತಿಯ ವಿವಾಹ ಪದ್ಧತಿಯನ್ನು ರೂಢಿಸಿಕೊಳ್ಳುವುದು ಅವರಿಗೆ ಅನಿವಾರ್ಯವಾಯಿತು.

ಸೋಲಿಗರಲ್ಲಿ ಅಪಹರಣ ವಿವಾಹ, ಸೇವಾ ವಿವಾಹ, ಬಹುಪತ್ನಿತ್ವ ವಿವಾಹ, ಮೈದುನ ವಿವಾಹ, ಏಕಸಂಗಾತಿ ವಿವಾಹ, ವಿಧವಾ ವಿವಾಹದ ಪದ್ಧತಿಗಳು ಹೆಚ್ಚು ಬಳಕೆಯಲ್ಲಿವೆ. ಆದರೆ ಅಪಹರಣ ವಿವಾಹ ಸೋಲಿಗರಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವುದನ್ನು ಗುರುತಿಸಬಹುದಾಗಿದೆ.

ಸೋಲಿಗರು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಅವರು ಗೆಡ್ಡೆ ಗೆಣಸು ತಿಂದು ಜೀವಿಸಬೇಕಾಗುತ್ತದೆ. ಗೆಡ್ಡೆ ಗೆಣಸು ಕೀಳುವ ಸಲುವಾಗಿ ಗಂಡು ಹೆಣ್ಣು ಬೇಧವಿಲ್ಲದೆ ಕಾಡಿನಲ್ಲಿ ಅಲೆಯುತ್ತಾರೆ. ಇಂತಹ ಸಂದರ್ಭದಲ್ಲಿ ಇಲ್ಲಿ ಗಂಡು ಒಂದು ಹೆಣ್ಣಿನ ಜೊತೆಯಲ್ಲಾಗಲಿ, ಒಂದು ಹೆಣ್ಣು ಗಂಡಿನ ಜೊತೆಯಲ್ಲಾಗಲಿ ಸಲಿಗೆ ಬೆಳೆಸಲು ಅವಕಾಶವಿರುತ್ತದೆ. ಈ ಬಗೆಯ ಕಾಡಿನ ವಾತಾವರಣದಲ್ಲಿ ಗಂಡು ಹೆಣ್ಣು ಒಂದು ಸ್ಥಳದಲ್ಲಿ ಕುಳಿತು ಮಾತಾಡಬಲ್ಲರು. ಪರಸ್ಪರ ಅರ್ಥ ಮಾಡಿಕೊಳ್ಳಬಲ್ಲರು. ಇದೇ ಸಂದರ್ಭದಲ್ಲಿಯೇ ಪರಸ್ಪರರ ಪ್ರೇಮ ಅಂಕುರಿಸಿ ಕಾಡಿಗೆ ಓಡಿಹೋಗುತ್ತಾರೆ. ನಂತರ ಒಂದು ವಾರ ಬಿಟ್ಟು ಹಾಡಿಗೆ ವಾಪಸ್ಸು ಬರುತ್ತಾರೆ. ಅವರಿಬ್ಬರು ಹಾಡಿಗೆ ಮರಳಿದ ಮೇಲೆ ಕುಲಪಂಚಾಯಿತಿ ಸೇರುತ್ತದೆ. ಹಾಡಿಯ ಹಿರಿಯರ ಅಪ್ಪಣೆ ಇಲ್ಲದೇ ಓಡಿ ಹೋಗಿದ್ದ ಗಂಡು ಹೆಣ್ಣುಗಳಿಗೆ ದಂಡ ವಿಧಿಸಲಾಗುತ್ತದೆ.

ಅದಲ್ಲದೆ ಹಿರಿಯರಿಗೆ ಒಂದು ಭೋಜನಕೂಟವನ್ನು ಸಹ ಏರ್ಪಡಿಸಬೇಕು. ಅನಂತರದಲ್ಲಿ ಅವರಿಬ್ಬರೂ ಗಂಡ ಹೆಂಡತಿಯರೆಂದು ಹಾಡಿಯವರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಈಗ ಈ ಪದ್ಧತಿ ಕಡಿಮೆಯಾಗುತ್ತಿದ್ದು, ನಿಶ್ಚಿತವಾದ ಮದುವೆಗಳು ಸಹ ನಡೆಯುತ್ತಿವೆ. ವಿವಾಹ ವಿಚ್ಛೇದನಗಳಿಗೆ ಅವಕಾಶವಿದ್ದು, ಮರುವಿವಾಹ ಅಥವಾ ವಿಧವಾ ವಿವಾಹಗಳು, ಕೂಡಾವಳಿ ವ್ಯವಸ್ಥೆಯೂ ಕಂಡುಬರುತ್ತದೆ.

**ಪ್ರೌಢಾವಸ್ಥೆ**

ಸೋಲಿಗರಲ್ಲಿ ಹುಡುಗಿಯ ಮೈನೆರೆದಾಗ ಅವಳ ಸೋದರಮಾವ ಬಂದು ಗುಡಿಸಲಿನ ಪಕ್ಕದಲ್ಲಿಯೇ ಒಂಬತ್ತು ಜಾತಿಯ ಸೊಪ್ಪುಗಳಾದ ಹಲವು, ಮಾವು, ಹೊಂಗೆ, ಬೇವು, ಬಸುರಿ, ತೆಂಗಿನಗರಿ, ಆಲ, ತೇಗ, ಮುತ್ತುಗದ ಸೊಪ್ಪುಗಳಿಂದ ಗುಡಿಸಲನ್ನು ನಿರ್ಮಿಸಿ, ಅವಳನ್ನು ಅಲ್ಲಿರಿಸುತ್ತಾರೆ. ಅಂದಿನಿಂದ 6 ದಿನಗಳವರೆಗೆ ಏಕಾಂತ ವಾಸದಲ್ಲಿಡುತ್ತಾರೆ. ಅವಳಿಗೆ ಸಹಾಯಕರಾಗಿ ಒಬ್ಬ ಹುಡುಗಿಯನ್ನು ಬಿಟ್ಟಿರುತ್ತಾರೆ. ಮತ್ಯಾರೂ ಇರಕೂಡದು, ಮಾತನಾಡಕೂಡದು, ಯಾರಿಗೂ ಅವಳ ಸಂಪರ್ಕವಿರುವುದಿಲ್ಲ. ಆಮೇಲೆ 9ನೇ ದಿನಕ್ಕೆ ಅವಳ ಸೋದರಮಾವ ಹೊಸಬಟ್ಟೆ, ಎಲೆ ಅಡಿಕೆ ತಂದುಕೊಡುತ್ತಾನೆ. ಅವಳಿಗೆ ಸ್ನಾನ ಮಾಡಿಸಿ ಹೊಸಬಟ್ಟೆ ಹಾಕಿ ಶಾಸ್ತ್ರ ಮಾಡುತ್ತಾರೆ. ಅಂದಿನಿಂದ ಅವಳು ಶುದ್ಧಳಾಗುತ್ತಾಳೆ.

**ಮರಣ ಸಂಸ್ಕಾರ**

ಸಾವು ಸಂಭವಿಸುವುದನನ್ನು ಮನೆಯಿಂದ ಹೊರಗೆ ಇಡುವುದು ಸಾಮಾನ್ಯವಾಗಿ ನಡೆದುಬಂದಿರುವ ಪದ್ಧತಿ. ಸೋಲಿಗರಲ್ಲಿ ಸತ್ತಿರುವ ವಿಷಯವನ್ನು ಹಾಡಿಯ ಯಜಮಾನರಿಗೆ ಮೊದಲು ತಿಳಿಸುತ್ತಾರೆ. ಸತ್ತವನ ಬಂಧುಗಳನ್ನು ಕರೆಸುವ ಸಲುವಾಗಿ ಆಳುಗಳನ್ನು ಕಳುಹಿಸುವರು. ಸತ್ತವನ ಮನೆಯ ಮುಂದೆ ಬೆಂಕಿ ಹಾಕುತ್ತಾರೆ. ಈ ಮನೆಯಲ್ಲಿ ಯಾರೋ ಸತ್ತಿದ್ದಾರೆ ಎಂಬುದನ್ನು ತಿಳಿಸುತ್ತದೆ. ಹೆಣಕ್ಕೆ ಬಂಧುಗಳು ಬೇಕಿಲ್ಲದಿದ್ದರೂ ಬಂಧುಗಳಿಗೆ ಹೆಣ ಬೇಕು. ಕಡೆಯದಾಗಿ ಸತ್ತವನ ಮುಖ ನೋಡಬೇಕು ಎಂಬ ಕಡೆಯ ಆಸೆ ಬಂಧುಗಳಿರುತ್ತದೆ. ಬಂಧುಗಳು ಬಂದು ಸೇರುತ್ತಾರೆ. ಸತ್ತವನಿಗಾಗಿ ಕಣ್ಣೀರು ಹಾಕುತ್ತಾರೆ.

ಬಂಧುಗಳು ಬಂದಾದ ಮೇಲೆ ಹೆಣಕ್ಕೆ ಬಿಸಿ ನೀರಿನಿಂದ ಸ್ನಾನ ಮಾಡಿಸಿ ಮಡಿ ಬಟ್ಟೆಯನ್ನು ಧರಿಸುತ್ತಾರೆ. ಆನಂತರ ಹೆಣಕ್ಕೆ ಪೂಜೆಮಾಡಿ ಹೆಣವನ್ನು ಚಟ್ಟದ ಮೇಲಿಟ್ಟು ಅದಕ್ಕೆ ತಂದಿರುವ ಹೊಸ ಬಟ್ಟೆಯನ್ನು ಹೊದಿಸಿ ಶವ ಅಲುಗದಂತೆ ಹಗ್ಗದಿಂದ ಬಿಗಿಯುತ್ತಾರೆ. ಸತ್ತ ವ್ಯಕ್ತಿ ಗಂಡಸಾಗಿದ್ದು ಅವನ ಹೆಂಡತಿ ಇನ್ನೂ ಬದುಕಿದ್ದರೆ ಅವಳಿಗೂ ಸ್ನಾನ ಮಾಡಿಸಿ ಹೊಸ ಸೀರೆ ತೊಡಿಸಿ, ಅವಳಿಗೂ ಅರಿಸಿನ, ಕುಂಕುಮ ಮತ್ತು ಮುಡಿಗೆ ಹೂವು ಮುಡಿಸಿ ಹೆಣದ ಪಕ್ಕದಲ್ಲಿಯೇ ಅವಳನ್ನು ಕೂರಿಸಿ ಅವರಿಬ್ಬರಿಗೂ ಪೂಜೆ ಮಾಡುವರು. ಅವಳಿಗೆ "ಮಡಿಲು ಅಕ್ಕಿ" ತುಂಬುವ ಪದ್ಧತಿ ಇದೆ. ಇವರಲ್ಲಿ ಸ್ಮಶಾನದ ಗುಂಡಿಯನ್ನು ಉತ್ತರ ದಕ್ಷಿಣವಾಗಿ ತೆಗೆಯುವ ರೂಢಿ ಉಂಟು. ಹಾಗೆಯೇ ಶವದ ತಲೆಯ ಭಾಗವನ್ನು ಉತ್ತರದ ಕಡೆಗೂ, ಕಾಲುಗಳನ್ನು ದಕ್ಷಿಣದ ಕಡೆಗೂ ಮಾಡಿ ಹೂಳುತ್ತಾರೆ. ಹನ್ನೊಂದನೇ ದಿನಕ್ಕೆ ತಿಥಿಯನ್ನು ಮಾಡುತ್ತಾರೆ.

ಪ್ರಸ್ತುತ ಘಟ್ಟದಲ್ಲಿ, ಸೋಲಿಗರ ಅಭಿವೃದ್ಧಿಗೆ ಸರ್ಕಾರಗಳು, ಸರ್ಕಾರೇತರ ಸಂಘ ಸಂಸ್ಥೆಗಳು ನಿರಂತರವಾಗಿ ಹಲವಾರು ಕಾರ್ಯಕ್ರಮಗಳನ್ನು ನೀಡುವುದರ ಜೊತೆಗೆ ಅವರ ಜೀವನ ಮಟ್ಟವನ್ನು ಸುಧಾರಿಸಲು ಶ್ರಮಿಸುತ್ತಿದ್ದಾರೆ. ಹತ್ತಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದರೂ ಸಹ ಅವರು ಸಮಾಜದ ಮುಖ್ಯವಾಹಿನಿಗೆ ಬಹು ದೂರವುಳಿದಿರುವಂತೆ ಬಾಸವಾಗುತ್ತಿದೆ. ಈಗಿನ ವಾತಾವರಣದಲ್ಲಿ ಸೋಲಿಗ ಜನಾಂಗದವರು ಸಮಾಜದ ಮುಖ್ಯವಾಹಿನಿಗೆ ಮರಳುತ್ತಿದ್ದು ಮತ್ತಷ್ಟು ಕಾರ್ಯಕ್ರಮಗಳು ಅವಶ್ಯಕವಾಗಿ ಜಾರಿಯಾಗಬೇಕಿವೆ. ಅವರ ಸಾಮಿಜಿಕ ಜೀವನ ವೃದ್ದಿಸಬೇಕಿದೆ. ಸೋಲಿಗ ಜನಾಂಗದ ಯುವಜನತೆ ಸಮಾಜದ ಮುಖ್ಯವಾಹಿನಿಗೆ ಬಂದು ಉತ್ತಮ ವಿದ್ಯಾಭ್ಯಾಸವನ್ನು ಪಡೆದು ಉತ್ತಮ ಪ್ರಜೆಗಳಾಗಿ ರೂಪುಗೊಳಿಸಲು ಹಲವಾರು ಯೋಜನೆಗಳು ಅವಶ್ಯಕವೆನಿಸಿವೆ.

**ಪರಾಮರ್ಶನ ಗ್ರಂಥಗಳು**


- Govt of India. (1981). Censes of India-1981. Registrar General of India, New delhi.
- Govt of India. (2011). Censes of India-2011. Registrar General of India, New delhi.
- Mysore District Hand Book, Govt of Karnataka, Bengaluru.
- ಸಮಾಜ ಕಲ್ಯಾಣ ಇಲಾಖೆ ವಾರ್ಷಿಕ ವರದಿ. (1995–96). ಕರ್ನಾಟಕ ಸರ್ಕಾರ, ಬೆಂಗಳೂರು.
- ಮಧು ಗುಂಡ್ಲುಪೇಟೆ. (2002). ಕರ್ನಾಟಕ ಬುಡಕಟ್ಟುಗಳ ಅಭಿವೃದ್ಧಿ. ಅಕ್ಷತ ಪ್ರಕಾಶನ, ಮೈಸೂರು.
- ಬಸವರಾಜ್ ಎಂ.ಎಂ. (1975). ಜೇನುಕುರುಬರು ಅಪ್ರಕಟಿತ ಕ್ಷೇತ್ರಕಾರ್ಯ ವರದಿ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.


IIMRD JOURNALS